ಸೆಲೆಬ್ರಿಟಿ

■ ಹನಿ

# 75ರ ರಸಿಕ ಪ್ರಧಾನಿ!

ಸಿಲ್ವಿಯೊ ಬರ್ಲುಸ್ಕೋನಿ ಇಟಲಿಯ ಪ್ರಧಾನಮಂತ್ರಿ. ಸದ್ಯಕ್ಕೀಗ ಆತ ರಸಿಕರ ರಾಜ! ಅತ್ಯಂತ ದೀರ್ಘ ಅವಧಿಗೆ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿರುವ ಬರ್ಲುಸ್ಕೋನಿ ಅವರ ರಸಿಕತೆಯ ಪ್ರಕರಣಗಳು ಒಂದೊಂದಾಗಿ ಬಯಲಾಗುತ್ತಿವೆ. ಪ್ರತಿ ವಾರವೂ ಒಂದಲ್ಲ ಒಂದು ಹುಡುಗಿ, 'ಓ ಅವ್ರಾ..! ಅವರ ಸೆಕ್ಸ್ ಪಾರ್ಟಿಗೆ ನಾನು ಹೋಗಿದ್ದೆ. ನನಗೆ ಭರ್ಜರಿ ಹಣ ಕೊಟ್ಟಿದ್ದಾರೆ' ಎಂದು ಬಹಿರಂಗ ಹೇಳಿಕೆ ಕೊಡುವುದು ನಡೆದೇ ಇದೆ. ಈ ಮಧ್ಯೆ ನೈಟ್ ಕ್ಲಬ್‌ನ ಬೆಲ್ಲಿ ಡ್ಯಾನ್ಸರ್ ಒಬ್ಬಳು, 'ನಾನಿನ್ನೂ 17 ವರ್ಷದ ಮೈನರ್ ಆಗಿದ್ದಾಗಲೇ ಪ್ರಧಾನಿ ನನ್ನ ಜತೆ ಕೂಡಿದ್ದಾರೆ. ಅದಕ್ಕಾಗಿ ನನಗೆ ಅವರು 6000 ಪೌಂಡ್‌ನಷ್ಟು ಯೂರೊ, 70 ಸಾವಿರ ಪೌಂಡ್ ಬೆಲೆಯ ಕಾರು ಮತ್ತು ಒಂದು ಡೈಮಂಡ್ ನೆಕ್ಲೆಸ್ ಕೊಟ್ಟಿದ್ದಾರೆ' ಎಂದು ಪ್ರಕಟಿಸಿದ್ದಾಳೆ. ಟಿವಿ ನಿರೂಪಕಿಯೊಬ್ಬಳು 'ಅವರ ಸೆಕ್ಸ್ ಪಾರ್ಟಿಗೆ ನಿಯಮಿತವಾಗಿ ಹೋಗುತ್ತಿದ್ದೆ. ಅದಕ್ಕೆ ಈವರೆಗೆ ಸುಮಾರು 1 ಲಕ್ಷ ಪೌಂಡ್ ದುಡ್ಡು ಕೊಟ್ಟಿದ್ದಾರೆ' ಎಂದಿದ್ದಾಳೆ. ಅದಕ್ಕೆ ತಕ್ಕಂತೆ ಆಕೆಯ ಬ್ಯಾಂಕ್ ಖಾತೆಗೆ ಪ್ರಧಾನಿಯ ಖಾತೆಯಿಂದ ಪ್ರತಿ ತಿಂಗಳೂ 8500 ಪೌಂಡ್ ಜಮಾ ಆಗುತ್ತಿದ್ದುದೂ ಪತ್ತೆಯಾಗಿದೆ! ಸಾವಿರಾರು ಮಹಿಳೆಯರು ಇಟಲಿಯ ಹಲವೆಡೆ ಬೀದಿಗಿಳಿದು ಪ್ರತಿಭಟನೆಯನ್ನೂ ನಡೆಸಿದ್ದಾರೆ. ಪ್ರಧಾನಿ ವಿರುದ್ಧ ಆರೋಪಗಳ ಕ್ರಿಮಿನಲ್ ತನಿಖೆಗೆ ಸ್ಥಳೀಯ ಕೋರ್ಟ್ ಆದೇಶ ನೀಡಿದೆ. ಆದರೆ ಬರ್ಲುಸ್ಕೋನಿ ಇದಕ್ಯಾವುದಕ್ಕೂ ಜಗ್ಗುತ್ತಿಲ್ಲ. ಮಧ್ಯ ಬಲಪಂಥೀಯ ಐಡಿಯಾಲಜಿಯ ಬರ್ಲುಸ್ಕೋನಿ, 'ಇವೆಲ್ಲ ವಿರೋಧಿ ಎಡಪಂಥೀಯರ ಕುತಂತ್ರ' ಎಂದಿದ್ದಾರೆ.



94-95, 2001-06 ಮತ್ತೀಗ 2008ರಿಂದ ಪ್ರಧಾನಿಯಾಗಿರುವ ಬರ್ಲುಸ್ಕೋನಿ, ಮಧ್ಯಮ ವರ್ಗದ ಕುಟುಂಬದಿಂದ ಬಂದವರು. ಬ್ಯಾಂಕ್ ನೌಕರನೊಬ್ಬನ ಮಗನಾಗಿ ಕಾಲೇಜಿನಲ್ಲಿ ಜಾಹೀರಾತು ಕುರಿತ ಕಾನೂನು ಪದವಿ ಪಡೆದಾತ. ಮೊದಲ ಹೆಂಡತಿ ಇದ್ದಾಗಲೇ ಎರಡನೆಯವಳ ಮೋಹಕ್ಕೆ ಬಿದ್ದು, ಅವಳನ್ನೂ ಕಟ್ಟಿಕೊಂಡವರು. ಈಗ ಇಬ್ಬರೂ ಪತಿಯಿಂದ ದೂರವಾಗಿದ್ದಾರೆ. ಹಾಗಾಗಿ ಗೆಳತಿಯರ ದಂಡೇ ಅವರ ಮನೆಯಲ್ಲಿ ತಳವೂರುತ್ತಿದ್ದಂತೆ. '75ರ ಹರೆಯದಲ್ಲಿ (ಬರ್ತ್‌ಡೇ 29-9-36) ಇವೆಲ್ಲ ಬೇಕಿತ್ತಾ..?' ಎಂದು ನಾವು ನೀವು ಕೇಳುವಂತಿಲ್ಲ- ಯಾಕೆಂದರೆ ಇತ್ತೀಚೆಗೆ ನಡೆದ ಸಮೀಕ್ಷೆಯೊಂದು, ಈ ಎಲ್ಲ ಆರೋಪಗಳ ಬಳಿಕ ಪ್ರಧಾನಿಯ ಜನಪ್ರಿಯತೆ ಶೇಕಡಾ 27ರಿಂದ ಶೇಕಡಾ 30ಕ್ಕೆ ಏರಿದೆ' ಎಂದು ಪ್ರಕಟಿಸಿದೆ!



# ಗಾಯಕನ ಪರದಾಟ

ರಾಹತ್ ಫತೇ ಅಲಿ ಖಾನ್ ಈಗ ಬಾಲಿವುಡ್‌ನ ಜನಪ್ರಿಯ ಗಾಯಕ. ಪಾಕಿಸ್ತಾನದ ಗಾಯಕರು ಮುಂಬೈಗೆ ಬಂದು ಹಾಡುವುದು ಹೊಸತೇನಲ್ಲ. ಹಾಗೆಯೇ ಬಂದಾಗಲೆಲ್ಲ ವಿವಾದ ಏಳುವುದೂ ಹೊಸತಲ್ಲ. ಕಳೆದ ಏಳು ವರ್ಷಗಳಿಂದ ಮುಂಬೈ, ಜೈಪುರಕ್ಕೆ ಬಂದು ಹೋಗುತ್ತಿದ್ದ ರಾಹತ್ ಫತೇ ಅಲಿ ಖಾನ್ ಇದೇ ಮೊದಲ ಬಾರಿಗೆ ವಿವಾದವೊಂದರಲ್ಲಿ ಸಿಲುಕಿದ್ದಾರೆ. ಅದೂ ಹಾಡಿಗೆ ಸಂಬಂಧಿಸಿದ್ದಲ್ಲ; ಹಣಕ್ಕೆ ಸಂಬಂಧಿಸಿದ್ದು.

ನವದೆಹಲಿಯಲ್ಲಿ ಸಂಗೀತ ಸಂಜೆಯೊಂದರಲ್ಲಿ ಭಾಗವಹಿಸಿ, ಪಾಕಿಸ್ತಾನಕ್ಕೆ ವಿಮಾನ ಹತ್ತಲು ಹೊರಟಿದ್ದ ರಾಹತ್ ಖಾನ್‌ರನ್ನು ಆದಾಯ ಗುಪ್ತಚರ ಇಲಾಖೆಯ ಅಧಿಕಾರಿಗಳು ಬಂಧಿಸಿದರು. ಕಾರಣ ಅವರಲ್ಲಿ ಇದ್ದ ಹೆಚ್ಚುವರಿ ಹಣ. ಭಾರತದ ವಿದೇಶಿ ವಿನಿಮಯ ಕಾಯ್ದೆ ಪ್ರಕಾರ, ವ್ಯಕ್ತಿಯೊಬ್ಬ ದೇಶದಿಂದ ಹೊರಹೋಗಬೇಕಾದರೆ 5 ಸಾವಿರ ಡಾಲರ್ ಹಣ ಮತ್ತು ಅಷ್ಟೇ ಮೌಲ್ಯದ ವಸ್ತುಗಳನ್ನು ಹೊಂದಿರಬಹುದು. ಆದರೆ ಅದಕ್ಕಿಂತ ಹೆಚ್ಚು ಮೌಲ್ಯದ ಹಣ ಇದ್ದರೆ ಕಸ್ಟಮ್ಸ್ ಅನುಮತಿ ಪಡೆಯಬೇಕು. ಮೊನ್ನೆ ಅಧಿಕಾರಿಗಳು ರಾಹತ್‌ರನ್ನು ಬಂಧಿಸಿದಾಗ ಅವರ ಬಳಿ 1.24 ಲಕ್ಷ ಡಾಲರ್ ಹಣ ಇತ್ತಂತೆ. 28 ಗಂಟೆಗಳ ಬಳಿಕ ಗೃಹಸಚಿವರ ಮಧ್ಯಸ್ಥಿಕೆಯಿಂದ ಬಿಡುಗಡೆಯೂ ಆಯಿತೆನ್ನಿ.

2004ರಲ್ಲಿ ರಾಹತ್ ಬಾಲಿವುಡ್‌ಗೆ ಮೊದಲ ಎಂಟ್ರಿ ಕೊಟ್ಟರು. ರಾಹತ್ ಅವರು ದಿ.ನುಸ್ರತ್ ಫತೇ ಅಲಿಖಾನ್‌ರ ಸೋದರ ಸಂಬಂಧಿ. 11ರ ಹರೆಯದಲ್ಲೇ ನುಸ್ರತ್ ಅವರ ಜತೆ ಇಂಗ್ಲೆಂಡ್ ಪ್ರವಾಸ ನಡೆಸಿ, ಸಮಾರಂಭಗಳಲ್ಲಿ ಸೋಲೊ, ತಂಡದ ಖವ್ವಾಲಿ ಪ್ರಸ್ತುತ ಪಡಿಸಿದವರು. ರಾಹತ್ ಶಾಸ್ತ್ರೀಯ ಸಂಗೀತ ಕಲಿತದ್ದೂ ನುಸ್ರತ್ ಬಳಿಯೇ. ಹಾಲಿವುಡ್‌ನಲ್ಲಿ ತನ್ನ ಸ್ವರದ ಏರಿಳಿತಗಳಿಂದ ಜನಪ್ರಿಯವಾಗಿರುವ ರಾಹತ್ 'ಇಷ್ಕಿಯಾಂ' ಚಿತ್ರದ ಹಾಡಿಗೆ ಫಿಲಂಫೇರ್ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಖವ್ವಾಲಿ, ಸೂಫಿ ಸಂಗೀತದಲ್ಲಿ ಎತ್ತಿದ ಕೈ. ಹಾಲಿವುಡ್‌ಗೂ (ಡೆಡ್ ಮ್ಯಾನ್ ವಾಕಿಂಗ್) ಪ್ರವೇಶ ಪಡೆದು ಮಿಂಚಿದವರು. ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿ, ಹೆಚ್ಚುವರಿ ಹಣದ ಬಗ್ಗೆ ಪ್ರಶ್ನಿಸಿದಾಗ ಗೊಂದಲಗೊಂಡ ರಾಹತ್, 'ನಾನು ಸ್ಕೂಲ್ ಡ್ರಾಪೌಟ್. ಹಣಕಾಸಿನ ಕಾಯ್ದೆಗಳ ಬಗ್ಗೆ ಗೊತ್ತಿಲ್ಲ' ಎಂದು ಹೇಳಿದ್ದು, ಗಾಯಕನ ಮುಗ್ಧತೆಯನ್ನೂ, ಸೆಲೆಬ್ರಿಟಿಯ ತೊಂದರೆಗಳನ್ನೂ ಒಟ್ಟಿಗೇ ಸೂಚಿಸುವಂತಿದೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65